
1451

# Government Grant in Aid teaching and non-teaching faculties'- Appointment approval Copy




## JSS INSTITUTE OF EDUCATION

Kowdalli, Sakaleshpur Tq, Hassan Dist – 573 134

DDE-10 14S-1

## ಕರ್ನಾಟಕ ಸರ್ಕಾರ

ಕ್ರಮಾಂಕ: ಇಡಿ 295 ಯುಎನ್ಇ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:01-02-2011.

**ಇಂದ:**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ)
ಬೆಂಗಳೂರು-560 001.

**ಇವರಿಗೆ:**
ನಿರ್ದೇಶಕರು,
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ,
100 ಅಡಿ ರಿಂಗ್ ರಸ್ತೆ, ಬನಶಂಕರಿ 3ನೇ ಹಂತ,
ಹೊಸಕೆರೆಹಳ್ಳಿ,
ಬೆಂಗಳೂರು-560 085.

ಮಾನ್ಯರೇ,

**ವಿಷಯ:** ಶಿಕ್ಷಣ ಮಹಾವಿದ್ಯಾಲಯಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ.

**ಉಲ್ಲೇಖ:**
1. ತಮ್ಮ ಪತ್ರ ಸಂ. ಶಿತ3.ಇತರೆ ಅನುದಾನ/02/2004-05, ದಿನಾಂಕ:31-12-2010.
2. ತಮ್ಮ ಪತ್ರ ಸಂ. ಶಿತ3.ಇತರೆ ಅನುದಾನ/02/2004-05, ದಿನಾಂಕ:04-01-2011.
3. ತಮ್ಮ ಪತ್ರ ಸಂ. ಶಿತ3.ಇತರೆ ಅನುದಾನ ಬಿ.ಇಡಿ08/09-10, ದಿ:24-03-2010.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ 07 ಶಿಕ್ಷಣ ಮಹಾವಿದ್ಯಾಲಯಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

| ಕ್ರ.ಸಂ. | ಶಿಕ್ಷಣ ಮಹಾವಿದ್ಯಾಲಯದ ಹೆಸರು ಮತ್ತು ಸ್ಥಳ | ಕಾಲೇಜು ಪ್ರಾರಂಭವಾದ ದಿನಾಂಕ: |
|---|---|---|
| 1 | ಬಿ.ಇ.ಎ. ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ* | 22-09-1980 |
| 2 | ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ, ಹಾಸನ ಜಿಲ್ಲೆ* | 21-08-1986 |
| 3 | ಎಸ್.ಜೆ.ಇ.ಎಸ್. ಶಿಕ್ಷಣ ಮಹಾವಿದ್ಯಾಲಯ, ಬೆಂಗಳೂರು | 09-08-1987 |
| 4 | ವಿಜಯನಗರ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ | 05-09-1987 |
| 5 | ಆಲ್ ಅಮೀನ್ ಶಿಕ್ಷಣ ಮಹಾವಿದ್ಯಾಲಯ, ಬೆಂಗಳೂರು | 11-04-1990 |
| 6 | ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ | 27-08-1996 |
| 7 | ಕಾಗಿನೆಲೆ ಶಿಕ್ಷಣ ಮಹಾವಿದ್ಯಾಲಯ, ಮೈಸೂರು | 26-11-1996 |

ಆದ್ದರಿಂದ, ದಿನಾಂಕ:01-06-1987ರಿಂದ ಡಿಸೆಂಬರ್ 1996ರವರೆಗೆ ಎಷ್ಟು ಶಿಕ್ಷಣ ಮಹಾವಿದ್ಯಾಲಯಗಳು ಪ್ರಾರಂಭವಾಗಿವೆ ಎಂಬ ಬಗ್ಗೆ ಖಚಿತವಾದ ಮಾಹಿತಿಯನ್ನು ಒದಗಿಸುವಂತೆಯೂ ಹಾಗೂ ಮೇಲ್ಕಂಡ ಪ್ರತಿಯೊಂದು ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳು, ಅವರ ವಿದ್ಯಾರ್ಹತೆ ಮತ್ತು ಪ್ರವರ್ಗಕ್ಕೆ ಸಂಬಂಧಿಸಿದ ವಿವರಗಳು, ನೇಮಕಾತಿಯಲ್ಲಿ ಪಾಲಿಸಲಾದ ಮೀಸಲಾತಿ ನಿಯಮ, ಕಾಲೇಜಿನಲ್ಲಿ ವಿದ್ಯಾರ್ಥಿ ಶಿಕ್ಷಕರ ಅನುಪಾತ, ಕಾಲೇಜಿನಲ್ಲಿ ಲಭ್ಯವಿರುವ ಮೂಲಸೌಕರ್ಯಗಳ ಬಗ್ಗೆ ವಿವರಗಳು ಹಾಗೂ ಇತ್ಯಾದಿ ಅಂಶಗಳ ಬಗ್ಗೆ ಪರಿಶೀಲಿಸಿ ದಾಖಲೆಗಳ ಸಹಿತ ವಿವರವಾದ ಮಾಹಿತಿಗಳನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,
(ಯು.ಬಿ. ಉಳವಿ) 01/02/11
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು).

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ, ಹಾಸನ ಜಿಲ್ಲೆ, ಈ ಕಾಲೇಜಿನ ಬೋಧಕ ಮತ್ತು ಬೋಧಕೇತರ ಹುದ್ದೆಗಳ ನೇಮಕಾತಿಯನ್ನು ವೇತನಾನುದಾನಕ್ಕೆ ಅನುಮೋದಿಸುವ ಬಗ್ಗೆ.

ಓದಲಾಗಿದೆ:
1. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯದ ಪತ್ರಗಳು: ಸಂಖ್ಯೆ: ಶಿತ3 ಇತರೆ ಅನುದಾನ 02/2004-05, ದಿನಾಂಕ 1) 31-12-2010 ಮತ್ತು 2) ದಿನಾಂಕ 04-11-2011
2. ಸರ್ಕಾರಿ ಆದೇಶ ಸಂಖ್ಯೆ:ಇಡಿ 295 ಯುಎನ್‌ಇ 2010, ದಿನಾಂಕ 13-04-2011
3. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ನಿರ್ದೇಶಕರ ಪತ್ರ ಸಂಖ್ಯೆ:ಶಿತ3.ಅನುದಾನ02/2009-10, ದಿನಾಂಕ 27-04-2011.
4. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 06 ವಿವಿಧ 2001,ದಿನಾಂಕ12-10-2001.

### ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾಗಿರುವ ಪತ್ರಗಳನ್ವಯ ಉಲ್ಲೇಖ(2)ರಲ್ಲಿನ ಸರ್ಕಾರಿ ಆದೇಶದಲ್ಲಿ, ಅನುದಾನ ಸಂಹಿತೆ (ಜಿಐಎ) ನಿಯಮಾವಳಿಗಳಿಗೆ ಸೂಕ್ತ ತಿದ್ದುಪಡಿ ತರುವ ಷರತ್ತು ಹಾಗೂ ಇನ್ನು ಕೆಲವು ಷರತ್ತುಗಳನ್ನು ವಿಧಿಸಿ, ಒಟ್ಟು ಆರು ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿಗಳನ್ನು ವೇತನಾನುದಾನಕ್ಕೆ ಒಳಪಡಿಸಲು ನಿರ್ಣಯಿಸಲಾಗಿದೆ. ಸದರಿ ಆದೇಶದಲ್ಲಿರುವ ಮಹಾವಿದ್ಯಾಲಯಗಳ ಪಟ್ಟಿಯಲ್ಲಿ, ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ, ಹಾಸನ ಜಿಲ್ಲೆ, ಈ ಕಾಲೇಜು ಕ್ರಮ ಸಂ. 02ರಲ್ಲಿ ಇರುತ್ತದೆ. ಸದರಿ ಕಾಲೇಜು ದಿನಾಂಕ:01-06-1987ರ ಪೂರ್ವದಲ್ಲಿ ಅಂದರೆ ದಿನಾಂಕ:21-08-1986ರಂದು ಪ್ರಾರಂಭವಾಗಿರುವುದರಿಂದ, ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ತಿಳಿಸಿರುವ, *"ಅನುದಾನ ಸಂಹಿತೆ (ಜಿಐಎ) ನಿಯಮಾವಳಿಗಳಿಗೆ ಸೂಕ್ತ ತಿದ್ದುಪಡಿ ತರುವ ಷರತ್ತಿಗೊಳಪಡಿಸಿ"*, ಎಂಬುದು ಈ ಕಾಲೇಜಿಗೆ ಅನ್ವಯವಾಗುವುದಿಲ್ಲ.

ಮೇಲೆ ಓದಲಾಗಿರುವ ಉಲ್ಲೇಖ (3)ರ ಪತ್ರದಲ್ಲಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ನಿರ್ದೇಶಕರು, ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ, ಹಾಸನ ಜಿಲ್ಲೆ, ಈ ಕಾಲೇಜು ದಿನಾಂಕ: 21-08-1986ರಂದು ಪ್ರಾರಂಭವಾಗಿದ್ದು, ಸತತವಾಗಿ ನಡೆಯುತ್ತಿರುವುದಾಗಿಯೂ ಹಾಗೂ ಈ ಸಂಸ್ಥೆಯ ಮೇಲೆ ಯಾವುದೇ ನ್ಯಾಯಾಲಯ ಪ್ರಕರಣಗಳು ಇರುವುದಿಲ್ಲವೆಂದೂ ಹಾಗೂ ಸದರೀ ಕಾಲೇಜಿಗೆ NCTEಯ ನಿಯಮದಂತೆ ಸ್ವಂತ ಕಟ್ಟಡವಿದ್ದು, ಎಲ್ಲಾ ರೀತಿಯ ಮೂಲ ಸೌಕರ್ಯಗಳನ್ನು ಹೊಂದಿರುವುದಾಗಿಯೂ ತಿಳಿಸಿದ್ದಾರೆ. ಹಾಗೆಯೇ ಸದರಿ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು NCTE/ ರಾಜ್ಯ ನೇಮಕಾತಿ ನಿಯಮಗಳನ್ವಯ ಶೈಕ್ಷಣಿಕ ವಿದ್ಯಾರ್ಹತೆ ಇತ್ಯಾದಿಗಳ ಬಗ್ಗೆ ಮಾಹಿತಿ/ ಅಂಕಿ ಅಂಶಗಳನ್ನು ತಮ್ಮ ಪ್ರಸ್ತಾವನೆಯಲ್ಲಿ ನೀಡಿರುತ್ತಾರೆ. ಇದರ ಜೊತೆಗೆ, ಪ್ರಾಂಶುಪಾಲರನ್ನೊಳಗೊಂಡ ತ್ರಿಸದಸ್ಯರ ಸಮಿತಿ, ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ, ಹಾಸನ, ಹಾಸನ ಜಿಲ್ಲೆ, ಇವರು ಸಲ್ಲಿಸಿರುವ ತಪಾಸಣಾ ವರದಿ ಹಾಗೂ ಸಿಬ್ಬಂದಿಗಳ ವಿದ್ಯಾರ್ಹತೆಗಳ ಬಗ್ಗೆ ದಾಖಲೆಗಳನ್ನೂ ತಮ್ಮ ಪ್ರಸ್ತಾವನೆಯ ಜೊತೆಯಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದು, ಅವುಗಳನ್ನು ಸಹ ಸಂವೀಕ್ಷಿಸಲಾಗಿದೆ.



13/11-12
6-6-11

ಮೇಲೆ (4)ರಲ್ಲಿ ಓದಲಾಗಿರುವ ಸರ್ಕಾರಿ ಅಧಿಸೂಚನೆಯಲ್ಲಿ 100 ವಿದ್ಯಾರ್ಥಿಗಳ ಸಂಖ್ಯಾಬಲವಿರುವ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಬೋಧಕ ಮತ್ತು ಬೋಧಕೇತರ ಮಾದರಿಯನ್ನು (ಸ್ಟಾಫ್ ಪ್ಯಾಟರ್ನ್) ನಿರ್ಧರಿಸಿದ್ದು, ಆ ಪ್ರಕಾರ ಒಬ್ಬ ಪ್ರಾಂಶುಪಾಲರು, ಉಪನ್ಯಾಸಕರುಗಳು ಸೇರಿದಂತೆ ಒಟ್ಟು 10 ಬೋಧಕ ಹುದ್ದೆಗಳು ಮತ್ತು 17 ವಿವಿಧ ಬೋಧಕೇತರ ಹುದ್ದೆಗಳು, ಈ ರೀತಿ ಒಟ್ಟು 27 ಹುದ್ದೆಗಳ ಮಂಜೂರಾತಿಗೆ ಅವಕಾಶವಿರುತ್ತದೆ.

ಈ ಅಂಶಗಳ ಹಿನ್ನಲೆಯಲ್ಲಿ ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ, ಹಾಸನ ಜಿಲ್ಲೆ ಇಲ್ಲಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಇಡಿ 119 ಯುಎನ್ಇ 2009, ಬೆಂಗಳೂರು, ದಿನಾಂಕ: 18-05-2011.</u>

ಈ ಅಂಶಗಳ ಹಿನ್ನಲೆಯಲ್ಲಿ ಜೆ.ಎಸ್.ಎಸ್ ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ, ಹಾಸನ ಜಿಲ್ಲೆ ಶಿಕ್ಷಣ ಮಹಾವಿದ್ಯಾಲಯದ ಈ ಕೆಳಕಂಡ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹುದ್ದೆಗಳನ್ನು ಕೆಳಗೆ ಹೇಳಿರುವ ಷರತ್ತುಗೊಳಪಡಿಸಿ ಆದೇಶಿಸಲಾಗಿದೆ.

ಬೋಧಕ ಸಿಬ್ಬಂದಿ:

| ಕ್ರಮ ಸಂಖ್ಯೆ | ಬೋಧಕರ ಹೆಸರು ಶ್ರೀಮತಿ/ಶ್ರೀ | ಜನ್ಮ ದಿನಾಂಕ | ನೇಮಕಾತಿ ದಿನಾಂಕ |
|---|---|---|---|
| 1 | ಡಾ: ಎನ್.ಎಸ್. ಸುರೇಶ್, ಪ್ರಾಂಶುಪಾಲರು (ದಿನಾಂಕ:20-02-2002ರಿಂದ ಪ್ರಾಂಶುಪಾಲರು) | 27-03-1962 | 01-10-1986 |
| 2 | ಶ್ರೀ ಅಬ್ದುಲ್ ಖಾದರ್, ಉಪನ್ಯಾಸಕರು | 04-06-1959 | 19-08-1987 |
| 3 | ಶ್ರೀ ಬಿ. ವೀರಯ್ಯ, ಉಪನ್ಯಾಸಕರು | 01-06-1961 | 12-11-1990 |
| 4 | ಶ್ರೀಮತಿ ಎಸ್.ಎಂ. ಮೀನಾಕ್ಷಿ ಉಪನ್ಯಾಸಕರು | 30-12-1959 | 24-07-1991 |
| 5 | ಡಾ: ಎಸ್.ನಂಜುಂಡಪ್ಪ, ಉಪನ್ಯಾಸಕರು | 15-02-1971 | 08-11-2001 |
| 6 | ಶ್ರೀ ದಿನೇಶ್ ಎಂ.ಕೆ. ಉಪನ್ಯಾಸಕರು | 15-05-1971 | 21-03-2002 |
| 7 | ಶ್ರೀ ನಂಜುಂಡಸ್ವಾಮಿ ಕೆ.ಎಸ್. ಉಪನ್ಯಾಸಕರು | 30-11-1969 | 10-11-2004 |
| 8 | ಶ್ರೀ ಪ್ರಭುಸ್ವಾಮಿ ಎಂ. ಉಪನ್ಯಾಸಕರು | 02-05-1972 | 10-11-2004 |
| 9 | ಶ್ರೀ ಆರ್. ಮಂಜುನಾಥ, ಉಪನ್ಯಾಸಕರು | 15-01-1977 | 12-11-2004 |
| 10 | ಶ್ರೀ ಸಿ.ಬಿ. ವಿಕ್ರಮ್, ಉಪನ್ಯಾಸಕರು | 27-04-1977 | 12-11-2004 |

ಬೋಧಕೇತರ ಸಿಬ್ಬಂದಿ:

| ಕ್ರ. ಸಂ. | ಹೆಸರು ಮತ್ತು ಪದನಾಮ ಶ್ರೀಮತಿ/ಶ್ರೀ | ಜನ್ಮದಿನಾಂಕ | ನೇಮಕಾತಿ ದಿನಾಂಕ |
|---|---|---|---|
| 1 | ಶ್ರೀಮತಿ ರೂಪ ಪಿ. ಗ್ರಂಥಪಾಲಕರು | 02-09-1978 | 12-11-2004 |
| 2 | ಶ್ರೀ ಮಹೇಶ ಎಸ್, ತಂತ್ರಜ್ಞ | 26-01-1984 | 29-11-2004 |
| 3 | ಶ್ರೀ ಕಾಳೇಗೌಡ, ದೈಹಿಕ ಶಿಕ್ಷಕರು | 08-07-1963 | 14-06-1997 |

| | | | |
|---|---|---|---|
| 4 | ಶ್ರೀ ಟಿ.ಆರ್. ಕನಕರಾಜು, ಪ್ರ.ದ.ಸ | 20-09-1966 | 01-09-1995 |
| 5 | ಶ್ರೀ ಬಿ.ಆರ್. ಜಯಪ್ರಕಾಶ್ ಪ್ರ.ದ.ಸ. | 04-09-1976 | 29-11-2004 |
| 6 | ಶ್ರೀ ಡಮರೇಶ್ವರ ಬಿ.ಸಿ. ಗ್ರಂಥಾಲಯ ಸಹಾಯಕ | 01-06-1972 | 08-12-2003 |
| 7 | ಶ್ರೀಮತಿ ಸುಜಾತ ಶೆಟ್ಟಿ ಸಿ.ಸಿ.ಟಿ. | 06-10-1969 | 01-06-1998 |
| 8 | ಶ್ರೀ ಮಂಜುನಾಥ್ ಎಂ. ಸಿ.ಸಿ.ಟಿ. | 08-07-1980 | 29-11-2004 |
| 9 | ಶ್ರೀ ಎಸ್.ಎಸ್. ಧರ್ಮರಾಜ, ಅಟೆಂಡರ್ | 15-06-1958 | 22-08-1986 |
| 10 | ಶ್ರೀ ಟಿ.ಎಸ್. ಮಂಜಯ್ಯ, ಅಟೆಂಡರ್ | 22-07-1974 | 02-06-1997 |
| 11 | ಶ್ರೀ ಎಸ್.ಪಿ. ಬಸವರಾಜು, ಅಟೆಂಡರ್ | 22-08-1973 | 08-12-2003 |
| 12 | ಶ್ರೀ ಜಗನ್ನಾಥ್ ಎಸ್. ಆರ್. ಜಟಗಾರ | 11-06-1963 | 02-09-2002 |
| 13 | ಶ್ರೀಮತಿ ಎಂ.ಸಿ. ನಂಜಮ್ಮ, ಡಿ. ದರ್ಜೆ | 10-11-1955 | 01-07-1989 |
| 14 | ಶ್ರೀ ಕಾರ್ಯಸ್ವಾಮಿ ಡಿ. ದರ್ಜೆ | 23-07-1975 | 08-12-2003 |
| 15 | ಶ್ರೀ ಮಹಾದೇವಸ್ವಾಮಿ, ಡಿ. ದರ್ಜೆ. | 01-11-1975 | 26-11-2004 |
| 16 | ಶ್ರೀ ರಾಜೇಶ್ ಎನ್. ಡಿ. ದರ್ಜೆ | 24-06-1976 | 26-11-2004 |

ಷರತ್ತುಗಳು:-

1. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರಾತಿನಿಧ್ಯದಲ್ಲಿ ಮೀಸಲಾತಿ ಕೊರತೆಯನ್ನು ಭವಿಷ್ಯತ್ತಿನಲ್ಲಿ ತೆರವಾಗುವ ಎಲ್ಲಾ ಹುದ್ದೆಗಳನ್ನು ಮೀಸಲಾತಿ ಕೊರತೆ ಸರಿದೂಗುವವರೆಗೆ ಸಂಬಂದಪಟ್ಟ ಮೀಸಲಾತಿ ಅಭ್ಯರ್ಥಿಗಳಿಂದಲೇ ಕಡ್ಡಾಯವಾಗಿ ನೇಮಕಾತಿ ಮಾಡಿಕೊಳ್ಳತಕ್ಕದ್ದು.

2. ಈ ಕಾಲೇಜಿನ ಬೋಧಕ/ಬೋಧಕೇತರ ಸಿಬ್ಬಂದಿಗಳ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ಎಲ್ಲಾ ಅಂಕಪಟ್ಟಿ/ಪ್ರಮಾಣ ಪತ್ರಗಳ ಸತ್ಯಾಸತ್ಯತೆಯನ್ನು ಸಂಬಂಧಿಸಿದ ಪ್ರಾಧಿಕಾರಗಳಿಂದ ದೃಢೀಕರಿಸಿಕೊಂಡ ನಂತರವೇ ವೇತನ ಪಾವತಿಗೆ ಕ್ರಮ ಕೈಗೊಳ್ಳುವುದು.

3. ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗಗಳ ಅಡಿಯಲ್ಲಿ ನೇಮಕಾತಿ ಹೊಂದಿದ್ದಲ್ಲಿ, ಅವರು ತಮ್ಮ ಜಾತಿ ಬಗ್ಗೆ ಸಿಂಧುತ್ವ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ನಂತರವೇ ಅಂತಹ ಸಿಬ್ಬಂದಿಗಳ ವೇತನ ಪಾವತಿಸಲು ಕ್ರಮ ವಹಿಸುವುದು.

4. ಹುದ್ದೆ ಅನುಮೋದನೆಗೊಂಡಿರುವ ಸಿಬ್ಬಂದಿಯು ಯಾವುದೇ ಹಂತದಲ್ಲಿ ತಪ್ಪು ಹೇಳಿಕೆ/ಅಸತ್ಯವಾದ ಮಾಹಿತಿಯನ್ನು ಒದಗಿಸಿದಲ್ಲಿ, ಅಂತಹ ನೇಮಕಾತಿಯನ್ನು ರದ್ದುಪಡಿಸಲಾಗುವುದು.

5. ಸಿಬ್ಬಂದಿಗಳ ವೇತನಾನುದಾನವು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂ. ಆಇ 55 ವೆಚ್ಚ-8/2011, ದಿನಾಂಕ:17-01-2011ರಲ್ಲಿ ಮತ್ತು ಟಿಪ್ಪಣಿ ಸಂ. ಆಇ 313 ವೆಚ್ಚ 8/2011, ದಿನಾಂಕ:29-03-2011ರಲ್ಲಿ ನೀಡಿರುವ ಅಭಿಪ್ರಾಯ/ ಸಹಮತಿಗಳನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಯು.ಬಿ. ಉಳವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು)

<u>ಇವರಿಗೆ:</u>
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.

<u>ಪ್ರತಿಯನ್ನು</u>

1. ಮಹಾಲೇಖಪಾಲರು (ಎ ಮತ್ತು ಇ). ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ರಾಜ್ಯ ಖಜಾನೆ ಇಲಾಖೆ, ಬೆಂಗಳೂರು/ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು -570 005.
5. ಕಾರ್ಯನಿರ್ವಾಹಕ ಕಾರ್ಯದರ್ಶಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ, ರಾಮಾನುಜ ರಸ್ತೆ, ಮೈಸೂರು -570 004.
6. ಪ್ರಾಂಶುಪಾಲರು, ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ, ಹಾಸನ ಜಿಲ್ಲೆ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-8, ವಿಧಾನಸೌಧ.
8. ವಿಶೇಷಾಧಿಕಾರಿ ಹಾಗೂ ಸರ್ಕಾರದ ಪದನಿಮಿತ್ತ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ).
9. ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಹಾಸನ ಜಿಲ್ಲೆ, ಹಾಸನ.
10. ಸಂಬಂಧಿಸಿದ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ - (ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಇವರ ಮುಖಾಂತರ).
11. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ/ಸರ್ಕಾರದ ಉಪಕಾರ್ಯದರ್ಶಿ (ವಿಶ್ವವಿದ್ಯಾಲಯಗಳು) ಯವರ ಆಪ್ತ ಸಹಾಯಕರು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ DEPARTMENT OF STATE EDUCATIONAL RESEARCH AND TRAINING
D S E R T NO 4, 100 FT RING ROAD, BANASHANKARI 3rd STAGE BENGALURU - 085
E MAIL: dsertkar@gmail.com . Website: http://dsert.kar.nic.in
Phone: 080 26422372 26422373 26422374 Fax: 26422377

ಸಂಖ್ಯೆ: ಶಿತವಿ ಇತರಅನುದಾನ 02/2009-10 ದಿನಾಂಕ: 05/03/2012

ಜ್ಞಾಪನ

ವಿಷಯ: ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ ಅನ್ನು ವೇತನಾನುದಾನಕ್ಕೆ ಒಳಪಡಿಸಿರುವುದರಿಂದ, ಸದರಿ ಕಾಲೇಜಿನ ಸಿಬ್ಬಂದಿ ವರ್ಗದವರುಗಳಿಗೆ ವೇತನ ನಿಗದಿಗೊಳಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ ಇಡಿ 295 ಯುಎಸ್‌ಇ 2010 ದಿನಾಂಕ 13/04/2011
2) ಸರ್ಕಾರಿ ಆದೇಶ ಸಂಖ್ಯೆ ಇಡಿ 119 ಯುಎಸ್‌ಇ 2009 ದಿನಾಂಕ 18/05/2011
3) ಪ್ರಾಂಶುಪಾಲರು, ಡಯಟ್ ಹಾಸನ, ಪತ್ರ ಸಂಖ್ಯೆ: ಸಿ6(1)ಡ.ದಾ.ಅ.ಬಿಇಡಿ. ಪ 37/2011-12 ದಿನಾಂಕ 26-11-2011
4) ಇದೇ ಪತ್ರ ಸಮಸಂಖ್ಯೆ ದಿನಾಂಕ 01/12/2011
5) ಸರ್ಕಾರದ ಪತ್ರ ಸಂಖ್ಯೆ: ಇಡಿ119/ಯು.ಎಸ್.ಇ 2009/ ದಿನಾಂಕ 27/02/2012.

ಪ್ರಸ್ತಾವನೆ:

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ ವೇತನಾನುದಾನಕ್ಕೆ ಒಳಪಡಿಸಲಾಯಿತು. ಉಲ್ಲೇಖ (2)ರ ಸರ್ಕಾರಿ ಆದೇಶದಲ್ಲಿ ಈ ಕಾಲೇಜು 10 ಬೋಧಕ ಮತ್ತು 16 ಬೋಧಕೇತರ ಸಿಬ್ಬಂದಿ ಸಮರ್ಪಕತೆಯನ್ನು ವೇತನಾನುದಾನಕ್ಕೆ ಒಳಪಡಿಸಿ ಆದೇಶ ಹೊರಡಿಸಿದ ದಿನಾಂಕದಿಂದ ಅಂದರೆ ದಿನಾಂಕ18/05/2011 ರಿಂದ ಅನ್ವಯಿಸುವಂತೆ ವೇತನಾನುದಾನದ ಆದೇಶವನ್ನು ಹೊರಡಿಸಿ ಅದರಲ್ಲಿ ಎಲ್ಲಾ ಸಿಬ್ಬಂದಿಗಳ ಮೂಲ ದಾಖಲಾತಿಗಳು, ಶೈಕ್ಷಣಿಕ ಅರ್ಹತೆಯ ಸತ್ಯಾಸತ್ಯತೆ ಸಂಬಂಧಿಸಿದಂತೆ ಪ್ರಾಧಿಕಾರಗಳಿಂದ ದೃಢೀಕರಿಸಿಕೊಂಡ ನಂತರ ವೇತನ ಪಾವತಿಗೆ ಕ್ರಮವಹಿಸಲು ತಿಳಿಸಲಾಯಿತು.

ಉಲ್ಲೇಖ (3)ರಲ್ಲಿ ಪ್ರಾಂಶುಪಾಲರು, ಡಯಟ್ ಹಾಸನ ರವರು ಸದರಿ ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ ಎಲ್ಲಾ ನೌಕರರ ಎಲ್ಲಾ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಪ್ರಾಧಿಕಾರಿಂದ ಪರಿಶೀಲಿಸಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಉಲ್ಲೇಖ (4)ರಲ್ಲಿ ಕೆಲವು ಸ್ಪಷ್ಟೀಕರಣ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಅದರಂತೆಯೇ ಉಲ್ಲೇಖಿತ (5)ರಲ್ಲಿ ಸರ್ಕಾರದಿಂದ ಮಾರ್ಗದರ್ಶನ ನೀಡಿರುವುದರಿಂದ ಸರ್ಕಾರದ ಆದೇಶ ದಿನಾಂಕ 18/05/2011 ರಂತೆ ಪ್ರಸ್ತಾವನೆ ಪರಿಶೀಲಿಸಲಾಗಿದೆ.

ಆದೇಶ

ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ ಈ ಕೆಳಕಂಡ ಬೋಧಕ/ ಬೋಧಕೇತರ ವರ್ಗದವರುಗಳಿಗೆ ದಿನಾಂಕ 18/05/2011 ರಿಂದ ಅನ್ವಯವಾಗುವಂತೆ ಉಲ್ಲೇಖ (1) & (2) ರ ಸರ್ಕಾರಿ ಆದೇಶದಲ್ಲಿ ಮಂಜೂರಾಗಿರುವ ವೇತನಾನುದಾನಕ್ಕೆ ಒಳಪಟ್ಟ ನೌಕರರಿಗೆ ಈ ಕೆಳಕಂಡಂತೆ ರಾಜ್ಯ ವೇತನ ಶ್ರೇಣಿಯನ್ನು ನಿಗದಿಗೊಳಿಸಲಾಗಿದೆ.

ಬೋಧಕರು

| ಕ್ರ ಸಂ | ನೌಕರರ ಹೆಸರು ಮತ್ತು ಪದನಾಮ | ಮೂಲವೇತನ (ರೂ.) | ವೇತನ ಶ್ರೇಣಿ | ಮುಂದಿನ ವಾರ್ಷಿಕ ಬಡ್ತಿ ದಿನಾಂಕ |
|---|---|---|---|---|
| 1 | ಡಾ. ಎಸ್.ಎಸ್.ಸುರೇಶ್, ಪ್ರಾಂಶುಪಾಲರು (ದಿನಾಂಕ 20/02/2002 ರಿಂದ ಪ್ರಾಂಶುಪಾಲರು) | 18150 | 18150-26925 | 18-05-2012 |
| 2 | ಶ್ರೀ ಅಬ್ದುಲ್ ಹಮೀದ್, ಉಪನ್ಯಾಸಕರು | 11400 | 11400-21600 | 18-05-2012 |
| 3 | ಶ್ರೀ ಬಿ ಸಿದ್ದಯ್ಯ, ಉಪನ್ಯಾಸಕರು | 11400 | 11400-21600 | 18-05-2012 |
| 4 | ಶ್ರೀಮತಿ ಎಸ್.ಎಂ.ಮೀನಾಕ್ಷಿ, ಉಪನ್ಯಾಸಕರು | 11400 | 11400-21600 | 18-05-2012 |
| 5 | ಡಾ. ಎಸ್.ಮಲ್ಲಿಕಾರ್ಜುನಪ್ಪ ಉಪನ್ಯಾಸಕರು | 11400 | 11400-21600 | 18-05-2012 |
| 6 | ಶ್ರೀ ದಿನೇಶ್ ಎಂ.ಕೆ. ಉಪನ್ಯಾಸಕರು | 11400 | 11400-21600 | 18-05-2012 |
| 7 | ಶ್ರೀ ನಂಜುಂಡಸ್ವಾಮಿ ಕೆ.ಎಸ್., ಉಪನ್ಯಾಸಕರು | 11400 | 11400-21600 | 18-05-2012 |
| 8 | ಶ್ರೀ ಪ್ರಭುಸ್ವಾಮಿ ಎಂ. ಉಪನ್ಯಾಸಕರು | 11400 | 11400-21600 | 18-05-2012 |

J.S.S. Institute of Education
P.B. 26, SAKALESHPUR-573 134
Hassan Dist

## ಜೆಎಸ್‌ಎಸ್ ಮಹಾವಿದ್ಯಾಪೀಠ

ಜಗದ್ಗುರು ಡಾ॥ ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು-570 004

GED/SSH/C6-300/PROBATIONARY/2012-13 Dt: 24.08.2013

# ಆದೇಶ

ವಿಷಯ : ಪರಿವೀಕ್ಷಣಾ ಅವಧಿ ಘೋಷಿಸುವ ಬಗ್ಗೆ

ಉಲ್ಲೇಖ : ತಮ್ಮ ಪ.ಸಂ.268/2013-14 ದಿನಾಂಕ 29.07.2013

** ** **

ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ, ಸಕಲೇಶಪುರ, ಹಾಸನ ಜಿಲ್ಲೆ ಇಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಳಕಂಡ 26 ಮಂದಿ ನೌಕರರ ಗೌಪ್ಯ ವರದಿಯನ್ನು ಆಧರಿಸಿ, ಅವರ ಕೆಲಸ ಕಾರ್ಯಗಳು ಸಮರ್ಪಕ ಹಾಗೂ ತೃಪ್ತಿಕರವಾಗಿರುವುದರಿಂದ ಸದರಿ ನೌಕರರ ಪರಿವೀಕ್ಷಣಾ ಅವಧಿಯನ್ನು ಕೆಳಗಿನಂತೆ ತೃಪ್ತಿಕರವೆಂದು ಘೋಷಿಸಿದೆ.

| ಕ್ರ. ಸಂ. | ನೌಕರರ ಹೆಸರು ಮತ್ತು ಹುದ್ದೆ ಶ್ರೀ/ಶ್ರೀಮತಿ | ಕರ್ತವ್ಯಕ್ಕೆ ಹಾಜರಾದ ದಿನಾಂಕ | ವೇತನ ರಹಿತ ರಜ ಇತ್ಯಾದಿ. | ಪರಿವೀಕ್ಷಣಾ ಅವಧಿ ಪೂರೈಸಿದ ದಿನಾಂಕ | ಪರಿವೀಕ್ಷಣಾ ಅವಧಿ ತೃಪ್ತಿಕರವೆಂದು ಘೋಷಿಸಿದ ದಿನಾಂಕ |
|---|---|---|---|---|---|
| 1 | ಡಾ.ಎನ್.ಎಸ್.ಸುರೇಶ್ ಪ್ರಾಂಶುಪಾಲರು | 18.05.2011 | – | 17.05.2013 | 18.05.2013 |
| 2 | ಅಬ್ದುಲ್ ಖಾದರ್ ಉಪನ್ಯಾಸಕರು | 18.05.2011 | – | 17.05.2013 | 18.05.2013 |
| 3 | ಬಿ.ವೀರಯ್ಯ ಉಪನ್ಯಾಸಕರು | 18.05.2011 | – | 17.05.2013 | 18.05.2013 |
| 4 | ಎಸ್.ಎಂ.ಮೀನಾಕ್ಷಿ ಉಪನ್ಯಾಸಕರು | 18.05.2011 | – | 17.05.2013 | 18.05.2013 |
| 5 | ಡಾ.ಎಸ್.ನಂಜುಂಡಪ್ಪ ಉಪನ್ಯಾಸಕರು | 18.05.2011 | – | 17.05.2013 | 18.05.2013 |
| 6 | ಎಂ.ಕೆ.ದಿನೇಶ್ ಉಪನ್ಯಾಸಕರು | 18.0[illegible].2011 | - | 17.05.2013 | 18.05.2013 |
| 7 | ಕೆ.ಎಸ್.ನಂಜುಂಡಸ್ವಾಮಿ ಉಪನ್ಯಾಸಕರು | 18.05.2011 | – | 17.05.2013 | 18.05.2013 |
| 8 | ಎಂ.ಪ್ರಭುಸ್ವಾಮಿ ಉಪನ್ಯಾಸಕರು | 18.05.2011 | – | 17.05.2013 | 18.05.2013 |
| 9 | ಸಿ.ಬಿ.ವಿಕ್ರಂ ಉಪನ್ಯಾಸಕರು | 18.05.2011 | – | 17.05.2013 | 18.05.2013 |
| 10 | ಆರ್.ಮಂಜುನಾಥ ಉಪನ್ಯಾಸಕರು | 18.05.2011 | – | 17.05.2013 | 18.05.2013 |

J.S.S. Institute of Education
No. 182/13-14
Dt. 24/8/13